


# ಎಸ್ಸೆನ್ ಶಾಸ್ತ್ರಿಗಳ ನವಗ್ರಹ ಚಿಕಿತ್ಸೆ

■ ಮಂಜುನಾಥ ಅದ್ದೆ

ಕಲೆ: ಗುರು ನಾವಳ್ಳಿ

ಆರು ಮೂರು ಒಂಬತ್ತು; ಕುಂಬಾರ ಮಾಡಿದ ಕೊಡನವ್ವಾ; ಮಂಗಳಮ್ಮನ ನಿದ್ದೆಗೆಟ್ಟ, ನಿಟ್ಟುಸಿರಿನ ರಾತ್ರಿಗಳು ಶುರುವಾಗಿ ಅದಾಗಲೇ ನಾಲ್ಕು ವರ್ಷಗಳು ಸವೆದಿದ್ದವು. ಪಾವಗಡದ ಹೈಸ್ಕೂಲಿಗೆ ಮರಿ ಜಿಂಕೆಯಂತೆ ಎದೆಯುಬ್ಬಿಸಿ ಹೆಮ್ಮೆಯಿಂದ ಹೋಗುತ್ತಿದ್ದ ಬಾಲ್ಯದ ದಿನಗಳು ನಡುವಯಸ್ಸು ದಾಟಿದ ಇಷ್ಟು ಕಾಲದ ಅಂತರದಲ್ಲಿ ಇನ್ನಿಲ್ಲದಂತೆ ಆವರಿಸಿ, ಈಗ ಕಾಡಿಸುತ್ತಿದ್ದವು. ಕಾಲೇಜು ಸೇರಿದ್ದ ಮಗ ವಿನೋದ ಕೊನೆಯ ವರ್ಷದ ಪರೀಕ್ಷೆ ಬರೆಯದೆ ಸಂಸಾರದ ಸೌರಮಂಡಲದಿಂದ ಕಣ್ಮರೆಯಾಗಿದ್ದ. ಆಗಾಗ್ಗೆ ಮನೆಗೆ ಗೆಸ್ಟ್ ಅಪಿಯರೆನ್ಸ್ ಆಗಿದ್ದ ಅವನು ಮಧ್ಯರಾತ್ರಿಯಲ್ಲಿ ಎದ್ದು ಲೈಟರ್ ಹಚ್ಚಿ ಬಿಳಿ ಪೌಡರ್‌ನ ಚಿಟಚಿಟ ಎನ್ನಿಸುತ್ತಾ, ಹೊಗೆಯನ್ನು ಮೂಗಿನಲ್ಲಿ ಎಳೆದುಕೊಳ್ಳುತ್ತಿದ್ದ. ಇಲ್ಲಿ ನೆನಪಿನ ಸುರುಳಿ ಈಚೀಚೆಗಂತೂ ಪ್ರತಿ ದಿನವೂ ಆಕೆಯ ತಲೆಯಲ್ಲಿ ಸುತ್ತುತ್ತಿತ್ತು. ತನ್ನ ಮೈಯ ರಕ್ತಮಾಂಸ ಸೇರಿಸಿ ಕತ್ತರಿಸಿ ಹೆತ್ತಿದ್ದ ಚೊಚ್ಚಲ ಹೆರಿಗೆಯ ಆ ಕ್ಷಣವೇ ಬಂದು ಬಂದು ಮನಸ್ಸಿಗೆ ಮುತ್ತಿಕೊಳ್ಳುತ್ತಿತ್ತು.

ಮಗನ ಸದೃಶ ರೂಪ ಮಂಗಳಮ್ಮನ ಕಣ್ಣ ಬಿಂದುವಿನಲ್ಲಿ ಸರಿದು ಮರೆಯಾಗಿದ್ದು ಹನುಮಂತರಾಯನ ಸಾವಿನ ದಿನ. ಮೂರು ವರ್ಷ ಹಾಸಿಗೆ ಹಿಡಿದು ನರಳಿದ ಮುಗಳೂರು ಬೆಸ್ತರ ಕೇರಿಯ ಶನಿವಾರಪ್ಪ ಹನುಮಂತರಾಯ ಉರುಫ್ ಎಂ.ಎಸ್. ರಾಯ್ ಸತ್ತ ದಿನ ಕಂಡ ಮಗ ವಿನೋದ, ಯಾವುದೋ ಲೀಲಾವಿನೋದದಲ್ಲಿ ತೇಲಿ ತೇಲಿ... ದೂರಕ್ಕೆ ಸರಿದಿದ್ದ. ಇದಾಗಿ ನಾಲ್ಕು ವರ್ಷ ಕಳೆದರೂ ಮಂಗಳಮ್ಮನಿಗೆ ಅವನ ಕುರುಹು ತಿಳಿದಿರಲಿಲ್ಲ.

ಮುಗಳೂರಿನ ನಾಡಹೆಂಚಿನ ಮನೆಯ ಗವ್ವಗತ್ತಲ ರಾತ್ರಿಗಳಲ್ಲಿ ಯಾವ ದಿಕ್ಕಿಗೆ ಕಣ್ಣೆರಿಸಿದರೂ ಈಕೆಗೆ ಮುಂದಿನ ದಾರಿ, ಬದುಕಿನ ತುದಿ ಎರಡೂ ಕಾಣದೆ ದಿಗ್ಮೂಢಳಾಗಿದ್ದಳು. ಯೌವನಕ್ಕೆ ಹತ್ತಿರವಿದ್ದ ಮಗಳ ತಲೆಯ ಮೇಲೆ ನಾಲ್ಕು ಅರಿಶಿನದ ಅಕ್ಕಿ ಕಾಳು ಬಿದ್ದ ಮೇಲೆ ಬದುಕಾದರೂ ಸರಿ, ಸಾವಾದರೂ ಸರಿ ಎಂಬ ಒಂದೇ ತುದಿಗೆ ಮಂಗಳಮ್ಮನ ಮನಸ್ಸು